

International Journal of Kannada Research
www.kannadajournal.com



**ISSN: 2454–5813**
IJKR 2019; 5(1): 221-224

© 2019 IJKR

www.kannadajournal.com
Received: 17-11-2018
Accepted: 20-12-2018



**ಸೌಮ್ಯ ಎಚ್.ಎಲ್**
ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ. ನ್ಯೂಹಾರಿಜನ್ ಕಾಲೇಜು, ಮಾರತ್ತಹಳ್ಳಿ, ಬೆಂಗಳೂರು.

**Correspondence**
**ಸೌಮ್ಯ ಎಚ್.ಎಲ್**
ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ. ನ್ಯೂಹಾರಿಜನ್ ಕಾಲೇಜು, ಮಾರತ್ತಹಳ್ಳಿ, ಬೆಂಗಳೂರು.


# ಬೆಸಗರಹಳ್ಳಿ ರಾಮಣ್ಣನ ಕಥೆಗಳಲ್ಲಿ ಬಂಡಾಯದ ನೆಲೆಗಳು

**ಸೌಮ್ಯ ಎಚ್.ಎಲ್**

ಕನ್ನಡದಲ್ಲಿ ಕಾವ್ಯ, ಕಾದಂಬರಿ, ನಾಟಕಗಳು, ಕಥೆಗಳು ತಮ್ಮದೇ ಆದ ಓದುಗರನ್ನು ಸೃಷ್ಟಿಸಿ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಸಾಮಾಜಿಕ ಕ್ಷೇತ್ರದಲ್ಲಿನ ಹಸಿವು, ಬಡತನ, ಆರ್ಥಿಕ ಸದೃಢತೆಗಾಗಿ ನಿರಂತರ ದುಡಿಮೆ, ಅನ್ಯಾಯವನ್ನು ಸಹಿಸಿಕೊಳ್ಳುವುದು, ಸಾಧ್ಯವಾದರೆ ಬಂಡಾಯವೆದ್ದು ಪ್ರತಿಭಟಿಸುವ ಸನ್ನಿವೇಶಗಳನ್ನು ಸಾಹಿತ್ಯ ಒಳಗೊಂಡಿದೆ. ಅದರಲ್ಲೂ ಕನ್ನಡ ಸಾಹಿತ್ಯದಲ್ಲಿ ಕಥಾ ಸಾಹಿತ್ಯ ಅತ್ಯಂತ ಜನಪ್ರಿಯ ಪ್ರಕಾರಗಳಲ್ಲೊಂದು, ಒಂದು ನಿರ್ದಿಷ್ಟ ವಿಷಯವನ್ನು ಒಳಗೊಂಡು ರಚನೆಗೊಳ್ಳುವ ಈ ಪ್ರಕಾರ ತನ್ನದೆ ಆದ ಓದುಗರನ್ನು ಹೊಂದಿದೆ.

ಡಾ.ಸಿ.ಎನ್. ರಾಮಚಂದ್ರನ್ 'ಆಖ್ಯಾನ–ವ್ಯಾಖ್ಯಾನ' ಕೃತಿಯಲ್ಲಿ ಕಥೆಯ ಮಹತ್ವನ್ನು ತಿಳಿಸುತ್ತಾರೆ. "ಪರಂಪರಾಗತ, ರೂಪನಿಷ್ಠ, ರಾಚಾನಿಕ ಮಾದರಿಗಳಲ್ಲಿ ಕಥಾ ಹಂದರವನ್ನು ನೋಡಿದಾಗ ಅದರ ಉದ್ದೇಶ ಹಾಗೂ ಸಾರವನ್ನು ಓದುಗನು ನೋಡಬಹುದಾಗಿದೆ " ಎಂಬ ವಿಚಾರವನ್ನು ವಿವಿಧ ಉದಾಹರಣೆಗಳ ಮೂಲಕ ವಿಶ್ಲೇಷಿಸುತ್ತಾರೆ. ತಮ್ಮದೇ ಆದ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತಾರೆ.

ಕಥಾ ಸಾಹಿತ್ಯ ಪರಂಪರೆಯಲ್ಲಿ ಬಂಡಾಯ ಪ್ರಕಾರ ಎಪ್ಪತ್ತರ ದಶಕದಿಂದ ಈಚೆಗೆ ಅತಿ ಹೆಚ್ಚು ಗುರುತಿಸಿಕೊಂಡಿದೆ. ಇಂಥ ಬಂಡಾಯದ ಪ್ರಕಾರದ ಬಗ್ಗೆ ಡಾ. ಆರ್.ಕೆ. ಮಣಿಪಾಲರವರು ತಮ್ಮ "ವಾಸ್ತವ" ಕೃತಿಯಲ್ಲಿ "ನಮ್ಮ ಸಾಮಾಜಿಕ ಸಂಬಂಧಗಳ ಹಿಂದಿರುವ ಮೋಸಗಳನ್ನು ಅಮಾನವೀಯತೆಗಳನ್ನು ಗುರುತಿಸಿ, ಸಮಾಜ ವ್ಯವಸ್ಥೆಯ ವಿರುದ್ಧ ಸ್ಫೋಟಿಸುತ್ತಾನೆ. ಈ ಸ್ಫೋಟನೆಯ ಆಳದಲ್ಲಿ ಹೊಸ ಸಮಾಜದ ರಚನೆಯ ಕಳಕಳಿ, ಅಸ್ತಿತ್ವದಲ್ಲಿರುವ ಸಮಾಜದ ಕುರಿತು ಉಗ್ರವಾದ ಅಸಹನೆ, ಒಂದರೊಡನೊಂದು ಬೆಸೆದುಕೊಂಡಿರುತ್ತದೆ. ಹೀಗೆ ಅಸಮಾನತೆ ಅನ್ಯಾಯ ಶೋಷಣೆಗಳನ್ನೇ ಮೂಲಧನ ಮಾಡಿಕೊಂಡು ಯುಗಯುಗಳಿಂದ ಬಡವರನ್ನು ಮತ್ತ ಜಾತಿಯ ದೃಷ್ಟಿಯಿಂದ ಹೀನರಾದವರನ್ನು ತುಳಿಯುತ್ತಾ ಬಂದ 'ಯಜಮಾನ– ಸಂಸ್ಕೃತಿಯ' ವಿರುದ್ಧ ಬಂಡೇಳುವ ಕೆಚ್ಚು ಮತ್ತು ಅಂಥ ಪ್ರತಿಭಟನೆಯ ಹಿಂದಿರುವ ಪ್ರಾಮಾಣಿಕತೆಯೇ ಬಂಡಾಯ ಸಾಹಿತ್ಯದ ಮೂಲನೆಲೆಯಾಗಿದೆ." ಎನ್ನುತ್ತಾರೆ.

ಒಟ್ಟಾರೆ ಬಂಡಾಯ ಮನಸ್ಥಿತಿಯ ಸಮಾಜದಲ್ಲಿ ಯಜಮಾನ್ಯದ ವಿರುದ್ಧ ಹೋರಾಟ ಮಾಡುವ ವ್ಯಕ್ತಿಗಳನ್ನು ನೋಡಬಹುದಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬೆಸಗರಹಳ್ಳಿ ರಾಮಣ್ಣನವರು ವಿಶಿಷ್ಟ ವ್ಯಕ್ತಿಯಾಗಿ ನಿಲ್ಲುತ್ತಾರೆ. ವೃತ್ತಿಯಲ್ಲಿ ವೈದ್ಯರಾಗಿದ್ದರೂ, ಪ್ರವೃತ್ತಿಯಲ್ಲಿ ಸಾಹಿತಿಗಳಾಗಿದ್ದವರು. ತಮ್ಮ ಬಹುಪಾಲು ಕಥೆಗಳಲ್ಲಿ ಗ್ರಾಮೀಣ ಸೊಗಡನ್ನು ತೋರಿಸುವ ಕೆಲಸ ಮಾಡಿದ್ದಾರೆ. ನಲವತ್ತೆಂಟು ಕಥೆಗಳನ್ನು ಒಳಗೊಂಡ 'ಕಣಜ' ಇವರ ಅಭಿನಂದನಾ ಗ್ರಂಥವಾಗಿ ಪ್ರಕಟವಾಗಿದೆ.

ಜಿ.ಎಸ್. ಅಮೂರರವರು 'ಕನ್ನಡ ಕಥನ ಸಾಹಿತ್ಯ' ಎಂಬ ಕೃತಿಯಲ್ಲಿ ಬೆಸಗರಹಳ್ಳಿ ರಾಮಣ್ಣನವರ ಕಥೆಗಳ ಬಗ್ಗೆ ವಿಶ್ಲೇಷಣೆ ಮಾಡುತ್ತಾ " ವಾಸ್ತವವಾದ ಘೋಷಿತ ಸಾಮಾಜಿಕ ವಾಸ್ತವವಾದವಲ್ಲವಾದರೂ ಅದಕ್ಕೆ ತೀರ ಹತ್ತಿರವಾದುದು, ಅವರ ಶ್ರೇಷ್ಠ ಕತೆಗಳಲ್ಲಿ ಕೇವಲ ವಾಸ್ತವದ ವಿರುದ್ಧದ ಪ್ರತಿಭಟನೆಯಿಲ್ಲ, ಸಮಾಜವಾದೀ ಶಕ್ತಿಗಳನ್ನು ಗುರುತಿಸಿ ನಿರೂಪಿಸುವ ಪ್ರಯತ್ನವೂ ಇದೆ. ಆ ಶಕ್ತಿಗಳನ್ನು ಅವರು ವೈಜ್ಞಾನಿಕವಾಗಿ ಹಾಗೂ ಒಳಗಿನಿಂದ ನಿರೂಪಿಸುತ್ತಾರೆ" ಎಂದು ಹೇಳಿದ್ದಾರೆ.

ಇಂತಹ ವೈಜ್ಞಾನಿಕ ರೂಪದಲ್ಲಿನ ಪ್ರತಿಭಟನೆಯನ್ನು ಗಮನಿಸುವ ಮೂಲಕ, ಬೆಸಗರಹಳ್ಳಿ ರಾಮಣ್ಣನವರ ಕೆಲವು ಕಥೆಗಳನ್ನು ಈ ಲೇಖನದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಗ್ರಾಮೀಣ ಭಾಗದ ಊಳಿಗಮಾನ್ಯ ಪದ್ಧತಿಯ ಅಡಿಯಲ್ಲಿ ಅನುಭವಿಸುವ ಬಡತನವನ್ನು 'ಜೀತ' ಕಥೆಯ ಮೂಲಕ ನೋಡಬಹುದಾಗಿದೆ. ಚಿಕ್ಕರಾಮನು ಸಾಹುಕಾರ್ ದೇವೀರಯ್ಯನ ಬಳಿ ಜೀತಕ್ಕೆ ಸೇರಿರುತ್ತಾನೆ. ಬಡತನದಲ್ಲೂ ಸಂತೋಷ ಕಾಣುವ ವ್ಯಕ್ತಿಯಾಗಿ ಚಿಕ್ಕರಾಮನು ಕಾಣುತ್ತಾನೆ. ಅವನು ಹಿಂದಿನ ರಾತ್ರಿ ಕುರುಕ್ಷೇತ್ರ ನಾಟಕವನ್ನು ನೋಡಿದ ನೆನಪಿನಿಂದ ಹೊರಬರದೆ ತನ್ನ ಮತ್ತೊಬ್ಬ ಸ್ನೇಹಿತನಾದ ಪುಟ್ಟನಿಂಗನ ಜೊತೆಗೆ ಸೇರಿ ಅದೇ ನಾಟಕವನ್ನು ಪುನರುಚ್ಚಿಸುವ ಕೆಲಸ ಮಾಡುತ್ತಾನೆ. ಮಧ್ಯಾಹ್ನದ ಸಮಯ ಬೆಳಿಗ್ಗಿನಿಂದ ಗೌಡನ ಮನೆಯಲ್ಲಿ ದುಡಿಮೆ, ಹಿಂದಿನ ರಾತ್ರಿ ನಾಟಕದ ಪ್ರಭಾವ ಎಲ್ಲವೂ ಸೇರಿ ನಿದ್ದೆ ಮಾಡುತ್ತಾನೆ. ದುರದೃಷ್ಟವಶಾತ್ ಅವನು ನೋಡಿಕೊಳ್ಳುತ್ತಿದ್ದ ದನಗಳು ಯಜಮಾನನ ಗದ್ದೆಗೆ ನುಗ್ಗಿ ಫಸಲನ್ನು ತಿಂದಿರುತ್ತವೆ. ಅದೇ ವೇಳೆಗೆ ದೇವೀರಯ್ಯನು ಅಲ್ಲಿಗೆ ಬಂದು ನೋಡಿ ಕೋಪಗೊಳ್ಳುತ್ತಾನೆ. ಚಾವಟಿಯಿಂದ ಚಿಕ್ಕರಾಮನನ್ನು ಬಡಿಯುತ್ತಾನೆ. ಹಸಿವು ಮತ್ತು ಬಡತನ ವ್ಯಕ್ತಿಯನ್ನು ದುಃಖಕ್ಕೆ ತಳ್ಳುತ್ತದೆ ಎಂಬ ಅಂಶವನ್ನು ಒಳಗೊಂಡು ರಚನೆಯಾದ ಈ ಕಥೆಯಲ್ಲಿ ಚಿಕ್ಕರಾಮನು ತಂದೆ ಮಾಡಿದ ಸಾಲಕ್ಕೆ ತಾನು ಜೀತದಾಳಾಗಿ ದುಡಿಯುತ್ತಾನೆ. ದುರಂತವೆಂದರೆ ಚಿಕ್ಕರಾಮನ ಅಣ್ಣನಾದ ಪುಟ್ಟಸ್ವಾಮಿಯು ಮತ್ತೊಬ್ಬರ ಬಳಿ ಜೀತದಾಳಾಗಿರುವ ಸನ್ನಿವೇಶ ಕಥೆಯಲ್ಲಿ ಕಾಣುತ್ತದೆ. ತಮ್ಮನ ಪರವಾಗಿ ಅಣ್ಣನು ಹೋರಾಡಿ ಹೊರಬಂದರೂ ಕೂಡ ತನ್ನ ಊರಿನ, ಮನೆಯ ಸ್ಥಿತಿಯನ್ನು ಕಂಡು ಅಸಹಾಯಕರಾಗುವ ಸನ್ನಿವೇಶ ಕಥೆಯಲ್ಲಿ ಮೂಡಿಬರುತ್ತದೆ. ವ್ಯಕ್ತಿಗಳು ಅವ್ಯವಸ್ಥೆಯ ವಿರುದ್ಧ ಬಂಡಾಯವೆದ್ದರೂ ಅಷ್ಟೇ ಬೇಗ ಅಸಹಾಯಕರಾಗುವ ಪರಿಸ್ಥಿತಿ ಈ ಕಥೆಯಲ್ಲಿ ಕಾಣುತ್ತದೆ.

ಚಂದ್ರಶೇಖರ ಪಾಟೀಲರು ಬಂಡಾಯದ ಬಗ್ಗೆ ಸಂಕ್ರಮಣ ಕೃತಿಯಲ್ಲಿ " ಬಂಡಾಯ ಒಂದು ಮನೋಧರ್ಮ, ವ್ಯಕ್ತಿಯನ್ನೊಳಗೊಂಡ ಸಮಸ್ಟಿ ಬದುಕಿನ ನಿರಂತರ ಸಂಘರ್ಷದ ಅರಿವಿನ ನೆಲೆಯಲ್ಲಿ ಆ ಬದುಕನ್ನು ವೀಕ್ಷಿಸುವ ಗ್ರಹಿಸುವ ಜೀರ್ಣ ಮಾಡಿಕೊಂಡು ನಂತರ ಅಭಿವ್ಯಕ್ತಿಸುವ ಕ್ರಮದಲ್ಲಿ ಇಂಥ ಮನೋಧರ್ಮ ದೃಷ್ಟಿಕೋನ ರೂಪು ಪಡೆಯುತ್ತದೆ. ಇಡೀ ಬದುಕಿನ ಅವಿಭಾಜ್ಯ ಅಂಗವೇ ಬೀಳುವುದಿಲ್ಲ. " ಎನ್ನುತ್ತಾರೆ. ಅದನ್ನು ಕಥೆಯ ಚೌಕಟ್ಟಿನಲ್ಲಿ ನೋಡಿದಾಗ ಚಿಕ್ಕರಾಮನಂತಹ ವ್ಯಕ್ತಿಗಳು ಅನ್ಯಾಯದ ವಿರುದ್ಧ ಹೋರಾಟ ಮಾಡಲಾರದೆ ಅನಿವಾರ್ಯವಾಗಿ ಹೊಂದಿಕೊಳ್ಳುವ ಸ್ಥಿತಿಯನ್ನು ನಾವು ನೋಡುತ್ತೇವೆ.

ಬೆಸಗರಹಳ್ಳಿ ರಾಮಣ್ಣನವರ 'ಗರ್ಜನೆ' ಕಥೆ ಒಂದು ವಿಶಿಷ್ಟವಾದ ಬಂಡಾಯದ ಸನ್ನಿವೇಶವನ್ನು ಒದಗಿಸುತ್ತದೆ. ಮರಿನಂಜನು ಹುಟ್ಟುವ ಮೊದಲೆ ತಂದೆಯನ್ನು ಕಳೆದುಕೊಳ್ಳುತ್ತಾನೆ. ಬೆಳೆಯುತ್ತಿರುವ ವೇಳೆಯಲ್ಲಿ ತಾಯಿಯು ಸಾಯುತ್ತಾಳೆ. ಪಟೇಲನ ಮನೆಯಲ್ಲಿ ಕೆಲಸ ಮಾಡಿಕೊಂಡಿರುತ್ತಾನೆ. ಆದರೆ ತನ್ನ ನಿಜವಾದ ತಂದೆ ಯಾರು ಎಂಬುದನ್ನು ತಿಳಿಯದಾಗಿರುತ್ತಾನೆ.

ಒಂದು ದಿನ ನಿಂಗಣ್ಣನ ಮಗಳು ಪಾರ್ವತಿಯನ್ನು ನೋಡಿ ಮನಸ್ಸಿನಲ್ಲಿ ವಯಸ್ಸಿನ ಸಹಜವಾದ ಕಾಮಾನೆಗಳು

ಬರುತ್ತವೆ. ಮದುವೆಯಾದರೆ ಅವಳನ್ನೇ ಆಗುತ್ತೇನೆಂದು ಆಸೆ ಪಡುತ್ತಾನೆ. ಆದರೆ ತನ್ನ ನಿಜವಾದ ತಂದೆ ಯಾರು ಎಂಬುದು ಯಕ್ಷ ಪ್ರಶ್ನೆಯಾಗಿ ಉಳಿಯುವುದಿಲ್ಲ. ಬದಲಿಗೆ ಒಮ್ಮೆ ಗಲಾಟೆಯ ಸಂದರ್ಭದಲ್ಲಿ ತನ್ನ ನಿಜವಾದ ತಂದೆ ಪಟೇಲನೆಂದು ತಿಳಿಯುತ್ತಾನೆ. ಜೊತೆಗೆ ಈ ವೇಳೆಗೆ ಪಟೇಲನ ಹೆಂಡತಿಯ ಕೆಲ ಮಾತುಗಳು ಅವನಲ್ಲಿ ಸಂಶಯವನ್ನು ಮೂಡಿಸುತ್ತವೆ. ಮುಂದೆ ತಾನೇ ಪಟೇಲನ ವಾರಸುದಾರನೆಂಬ ಸನ್ನಿವೇಶವನ್ನು ತಂದುಕೊಳ್ಳುತ್ತಾನೆ.

'ನಾ ಕೈ ಹಿಡಿದರೆ ನಿನ್ನೇ ಪಾರ್ವತಿ; ಇಲ್ಲದಿದ್ದರೆ ಇಲ್ಲ. ಹಾದರಕ್ಕೆ ಹುಟ್ಟಿದೋನು ಅಂದ್ರೆ ಪಟೇಲರ ಮುಂದೆ ಕತ್ತಿನ ಪಟ್ಟಿ ಹಿಡಿದು ಎಳೆದುಕೊಂಡು ಹೋಗಿ ನಿಲ್ಲಿಸಿ, ನಾನು ನಿಮಗೆ ಹುಟ್ಟಿದವನೋ ಇಲ್ಲೋ ಹೇಳಿ ಅಂತೀನಿ" ಎಂದು ಹೇಳುವ ಮೂಲಕ ಕಥೆ ಮುಕ್ತಾಯವಾಗುತ್ತದೆ. ವ್ಯಕ್ತಿಯೊಬ್ಬನು ಮದುವೆಯ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಹುಟ್ಟನ್ನು ಹುಡುಕಲು ಹೋಗುವ ಸನ್ನಿವೇಶ ಜೊತೆಗೆ ತಾನೇ ಹೋರಾಟ ಮಾಡಿ ನಿಲ್ಲುವುದು. ಪಟೇಲನ ಸಂತತಿ ತಾನೆಂಬುದನ್ನು ಬಿಂಬಿಸಿಕೊಳ್ಳುವ ವಿಚಾರ ಈ ಕಥೆಯಲ್ಲಿ ನೋಡಬಹುದಾಗಿದೆ.

ಬೆಸಗರಹಳ್ಳಿಯ ಬಹುಪಾಲು ಕಥೆಗಳು ಹಳ್ಳಿಯ ಜೀತ ಪದ್ಧತಿಗಳಿಂದ, ಊಳಿಗಮಾನ್ಯದ ದುರಂತವನ್ನು ಹಾಗೂ ಆಕ್ರೋಶದಿಂದ ಕೂಡಿದ ಬಂಡಾಯದ ಪ್ರವೃತ್ತಿಯಿಂದ ನೋಡುವ ವಿಚಾರಗಳನ್ನು ತಂದಿದ್ದಾರೆ. ಅವರ 'ಚಲುವನ ಪರಂಗಿ ಗಿಡಗಳು' ಶಾಲೆಯ ಹುಡುಗನೊಬ್ಬನು ಬಿ.ಡಿ.ಓ. ಸಾಹೇಬನ ಪೌಷ್ಠಿಕಾಂಶದ ವಿಚಾರಗಳು ಮತ್ತು ಮೆರವಣಿಗೆಳಿಂದ, ಪ್ರಭಾವಿತನಾಗಿ ಚಲುವನೆಂಬ ಹುಡುಗನು ಏಳನೇಯ ತರಗತಿಯನ್ನು ಓದುತ್ತಿದ್ದವನು ತನ್ನ ಗುಡುಸಿಲಿನ ಮುಂದೆ ಪರಂಗಿ ಗಿಡಗಳನ್ನು ನೆಟ್ಟು ಪೋಷಿಸತೊಡಗಿದನು. ಸೊಗಸಾಗಿ ಬೆಳೆದ ಆ ಗಿಡಗಳಲ್ಲಿ ಪರಂಗಿ ಕಾಯಿಗಳು ಕಚ್ಚತೊಡಗಿದವು. ತುಂಬಾ ಚೆನ್ನಾಗಿ ಬೆಳದೆ ಆ ಗಿಡಗಳ ಪೋಷಣೆಯಲ್ಲಿ ಚೆಲುವನ ತಂದೆ ಮೂಗರನ ಪಾತ್ರವೂ ಹೆಚ್ಚಿತ್ತು. ಆದರೆ ಊರಿನ ಗೌಡನ ಜೊತೆಗಿನ ವಿರಸದ ಬಲಿ ಆ ಪರಂಗಿ ಗಿಡಗಳ ಮೇಲೆ ಪರಿಣಾಮವನ್ನು ಉಂಟುಮಾಡಿತು. ಕೋಪದ ಬರದಲ್ಲಿ ಗೌಡನ ವಿರದ್ಧು ಪ್ರತಿಭಟಿಸುತ್ತಾ ಆ ಪರಂಗಿ ಗಿಡಗಳನ್ನು ನಾಶ ಪಡಿಸುವ ಹೃದಯ ವಿದ್ರಾವಕ ಘಟನೆ ಜರುಗುತ್ತದೆ. ಅದರ ದುರಂತ ಪರಿಣಾಮ ಆ ಚೆಲುವನ ಮೇಲೆ ಬೀರುತ್ತದೆ. ನೊಂದು ಕೊಳ್ಳುತ್ತಾನೆ. ನೋವಿನ ಮನಸ್ಸಿನ ಭಾರದಿಂದ ನರಳುತ್ತಾನೆ.

ಪುನಃ ಗಿಡಗಳನ್ನು ನೆಡುವ ಶಾಲೆಯ ಮೇಸ್ತ್ರರ ಸಹಾಯವು ಚೆಲುವನ ಮೇಲೆ ಪ್ರಭಾವ ಬೀರಿ ಲವಲವಿಕೆಯಿಂದ ಕೂಡಿದ ಹುಡುಗನಾಗಿ ಪರಿವರ್ತನೆಯಾಗುವ ವಿಭಿನ್ನವಾದ ಕಥೆಯನ್ನು ನೋಡಬಹುದಾಗಿದೆ.

ಜಾತಿಯ ಹಿನ್ನೆಲಯಲ್ಲಿ ಪ್ರಾರಂಭವಾಗು 'ಕಕರನ ಯುಗಾದಿ' ಬೆಸಗರಹಳ್ಳಿ ರಾಮಣ್ಣನವರ ಮತ್ತೊಂದು ವಿಶಿಷ್ಟವಾದ ಕಥೆಯಾಗಿದೆ. ಈ ಕತೆಯನ್ನು "ಸಾಮಾಜಿಕ ವಾಸ್ತವವಾದ ಪರಿಪ್ರೇಕ್ಷ್ಯದಲ್ಲಿ ನೋಡಿದಾಗ ನಮ್ಮ ಗಮನಕ್ಕೆ ಬರುವ ಮುಖ್ಯ ಅಂಶವೆಂದರೆ ಈ ಕತೆಯಲ್ಲಿನ ಸಾಮಾಜಿಕ ಹರಿವು. ಕಥೆಯ ಮುಖ್ಯ ದೃಷ್ಟಿಕೋನ ಹೊಲೆಯ ಜಾತಿಗೆ ಸೇರಿದ ಕಕರನದಾದರೂ ಇಲ್ಲಿ ಸಮಾಜದ ಹಲವಾರು ಸ್ತರಗಳ ಉಪಸ್ಥಿತಿಯಿದೆ. ಜೋಯಿಸರು, ಪುಟ್ಟೇಗೌಡರು, ಅಂಗಡಿ ಕುಳ್ಳಯ್ಯ, ಆಸ್ಪತ್ರೆಯ ಮಿಡ್‌ವೈಫ್ ಮೊದಲಾದವರು ಕೇವಲ ವ್ಯಕ್ತಿಗಳಾಗಿರದೆ ಈ ಸ್ತರಗಳ ಪ್ರತಿನಿಧಿಗಳೂ ಆಗಿದ್ದಾರೆ. ಕಕರನ ಸಂವೇದನೆಯಲ್ಲಿ ಸಾಂಪ್ರದಾಯಿಕ ಅಂಶಗಳಿವೆಯಾದರೂ ಅದು ಮುಖ್ಯವಾಗಿ ಅವನ ಪ್ರಶ್ನೆಗಳಿಂದಲೇ ಕಥೆ ಪ್ರಾರಂಭವಾಗುತ್ತದೆ. (ಲೇ. ಜಿ.ಎಸ್. ಅಮೂರ., ಕನ್ನಡ ಕಥನ ಸಾಹಿತ್ಯ: ಸಣ್ಣಕತೆ, ಪುಟ 376)

"ಮಳೆ ಏಕೆ ವರ್ಷ ಸರಿಯಾಗಿ ಉಯ್ಯುವುದಿಲ್ಲ? ಬೆಳೆ ಏಕೆ ಆಗುವುದಿಲ್ಲ? ಜನ ಏಕೆ ಮೂಳಯ ಹಂದರವಾಗಿ ಬೇಲಿಯ ಮೇಲೆ ಮಲಗಿದವರಂತೆ ಬದುಕಿದ್ದಾರೆ?" ಮನೆಯಲ್ಲಿ ನರಳುತ್ತ ಬಿದ್ದ ಹೆಂಡತಿ, ಕಳ್ಳ ಬಸಿರಿನಿಂದ ಅವಮಾನಕ್ಕೀಡಾದ ಮಗಳು, ಯುಗಾದಿಯ ಹಬ್ಬದ ಸಂತೋಷ ಬಯಸುವ ಮಕ್ಕಳು ಅವನಿಗೆ ಮನುಷ್ಯನ ಬದುಕಿನ ಬಗ್ಗೆ ಜಿಗುಪ್ಸೆ ಮೂಡುತ್ತದೆ. "ಹಾಳು ಮನುಷ್ಯ ಜನ್ಮ ಎತ್ತದೆ ಕುರಿಯೋ, ಆಡೋ, ಕೋಳಿಯೋ ಆಗಿ ಹುಟ್ಟಿದ್ದರೆ ಸಾಕಿದವರು ಮಾರಿ ಬಿಡುತ್ತಿದ್ದರು. ಯಾರೋ ಕುಯ್ದು ತಿಂದು ತೇಗಿ ಆನಂದಿಸುತ್ತಿದ್ದರು." ಮಗಳು ಗಂಡು ಹಡೆದುದು ಎರಡನೆಯವರಿಗೆ ಅವನ ಅದೃಷ್ಟವೆಂದು ಕಂಡರೆ ಅವನಿಗೆ 'ಏನು ತಾತನೋ ಏನು ಕತೆಯೋ, ಹಾಳ್ಮಗ ಸತ್ತು ಹೋಗಿದ್ದರೆ ಚೆನ್ನಾಗಿತ್ತು' ಎಂದೆನಿಸುತ್ತದೆ. ಪ್ರತಿ ಹಂತದಲ್ಲೂ ಬಂಡಾಯ ಮನಸ್ಥಿತಿಯಿಂದ ಕೂಡಿದವನಾದರೂ ಅದನ್ನು

ಪ್ರತಿಭಟಿಸುವ ಗೋಜಿಗೆ ಕಕರನು ಹೋಗುವುದಿಲ್ಲ.

ಕಕರನು ಉಗಾದಿ ಹಬ್ಬದ ದಿನ ಜೋಯಿಸರ ಬಳಿ ಸಹಾಯ ಕೇಳಲು ಬರುತ್ತಾನೆ. ಜೋಯಿಸರ ಮನೆಯಲ್ಲಿ ನಡೆಯುವ ರಾದ್ದಾಂತದಿಂದ ಜೋಯಿಸನ ಹೆಂಡತಿ ಯಶೋಧಮ್ಮ ಬಾವಿಗೆ ಬೀಳುತ್ತಾಳೆ. ಮನೆಯಲ್ಲಿ ನಡೆಯುವ ಘಟನೆಯಿಂದ, ಹೊಲೆಯನಾದರೂ ಕಕರನು ಬಾವಿಗೆ ಬಿದ್ದು ಯಶೋಧಮ್ಮಳನ್ನು ರಕ್ಷಿಸಲು ಮುಂದೆ ಬರುತ್ತಾನೆ. ಆತನು ಬಾವಿಗೆ ಬಿದ್ದು ಆಕೆಯನ್ನು ಹುಡುಕುವಾಗ ಬಾವಿಯಲ್ಲಿದ್ದ ಯಶೋಧಮ್ಮ ಜೀವದ ರಕ್ಷಣೆಗಾಗಿ ಕಕರನನ್ನು ತಬ್ಬಿ ಹಿಡಿಯುತ್ತಾಳೆ. ಕಕರನಿಗೂ ಉಸಿರು ಕಟ್ಟಿ ಸಾಯಿತ್ತಾನೆ. ಯಶೋಧಳು ಸಾಯುತ್ತಾಳೆ. ಈ ಸನ್ನಿವೇಶದ ಲಾಭ ಪಡೆದ ಶ್ಯಾನುಭೋಗನು ಮಾತ್ರ ಜೋಯಿಸರ ಮನೆಗೆ ಹೊಲೇರವನು ಹೋದ ವಿಚಾರವನ್ನು ರಾದ್ಧಾಂತ ಮಾಡುತ್ತಾನೆ. ಆದರೆ ಕಕರನ ಹೆಂಡತಿ ಮತ್ತು ಸಂಸಾರ ಮತ್ತಷ್ಟು ಸಂಕಟಕ್ಕೀಡಾಗುವ ಸನ್ನಿವೇಶದ ಮೂಲಕ ಕಥೆ ಮುಕ್ತಾಯವಾಗುತ್ತದೆ. ಇಲ್ಲಿ ಕಕರನು ಪ್ರತಿಭಟಿಸುವ ವ್ಯಕ್ತಿಯಾಗಿ ಕಾಣದಿದ್ದರೂ "ಜಾತಿ ಎಂಬುದು ಮನುಷ್ಯನಿಂದ ರೂಪಿತವಾದುದೇ ಹೊರತು ದೇವರಿಂದಲ್ಲ" ಎಂಬ ಮಾತು, ಕಕರನು ತಾನು ಹೊಲೆಯನೆಂದು ಹೇಳಿದಾಗ ಜೋಯಿಸನು ಹೇಳುವ ಮಾತಿದು. ವ್ಯಕ್ತಿಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವ ಸಮಾಜ, ವ್ಯಕ್ತಿ ವ್ಯಕ್ತಿಗಳನ್ನು ಪ್ರೀತಿಸುವಲ್ಲಿ ಜಾತಿಯನ್ನು ಪ್ರಧಾನ ಮಾಡುತ್ತದೆ.

'ಗಾಂಧಿ' ಕಥೆಯಲ್ಲಿ ಬರುವ ಗಾಂಧಿ ಎಂಬ ಹುಡುಗನಿಗೆ ಸಂಬಂಧಿಸಿದ ಕಥೆಯಾಗಿದೆ. ಬೆಸಗರಹಳ್ಳಿ ರಾಮಣ್ಣನ ಗಾಂಧಿ, ಬಡಕುಟುಂಬದ ರೋಗಿಯ ಸ್ಥಿತಿ, ಸರ್ಕಾರಿ ಆಸ್ಪತ್ರೆಯಲ್ಲಿ ನಡೆದುಕೊಳ್ಳುವ ರೀತಿನೀತಿಗಳ ಸುತ್ತಾ ಹೆಣೆದಿರುವ ಕಥೆಯಾಗಿದೆ. ಗಾಂಧಿ ಕಂಡ ರಾಮರಾಜ್ಯದ ಕನಸು ಹೇಗೆ ನನಸಾಗಲಿಲ್ಲವೋ ಹಾಗೆಯೇ ಗಾಂಧಿ ಎಂಬ ಹುಡುಗನ ಕನಸು ನನಸಾಗಲೇ ಇಲ್ಲ. ಆದರೆ ವೈದ್ಯರ ನಿರ್ಲಕ್ಷ್ಯದ ವಿರುದ್ದ ಆ ಹುಡುಗನು ಪ್ರತಿಭಟಿಸುವ ರೀತಿ ಸ್ವತಂತ್ರ ಭಾರತದಲ್ಲಿ ತನ್ನ ಹಕ್ಕಿಗಾಗಿ ಹೋರಾಟ ಮಾಡುವ ಪ್ರತಿನಿಧಿಯಂತೆ ಕಾಣುತ್ತಾನೆ.

ಹೀಗೆ ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಬಹುಪಾಲು ಹೋರಾಟದ ನೆಲೆಗಳು ಕಾಣುತ್ತವೆ. ಬಂಡಾಯದ ಪ್ರತಿಭಟನೆಗಳನ್ನು ಅವರ ಬಹುಪಾಲು ಕಥೆಗಳಲ್ಲಿ ನೋಡಬಹುದಾಗಿದೆ.

**ಪರಾಮರ್ಶನ ಗ್ರಂಥಗಳು.**


1. ಸಂಕ್ರಮಣ – ಚಂದ್ರಶೇಖರ ಪಾಟೀಲ.
2. ಆಖ್ಯಾನ–ವ್ಯಾಖ್ಯಾನ – ಡಾ. ಸಿ.ಎನ್. ರಾಮಚಂದ್ರನ್.
3. ವಾಸ್ತವ – ಡಾ. ಆರ್.ಕೆ. ಮಣಿಪಾಲ.
4. ಕನ್ನಡ ಕಥನ ಸಾಹಿತ್ಯ: ಸಣ್ಣಕತೆ – ಜಿ.ಎಸ್. ಅಮೂರ.
5. ಕಣಜ – ಡಾ. ಬೆಸಗರಹಳ್ಳಿ ರಾಮಣ್ಣ